ಜಗದೀಶ ಬಿ. ಹೊಸೂರು, ಮೈಸೂರು

ಮಳೆಯಿಂದ ಗುಡಿ ಮುಳುಗಿದರೂ ದೇವರೇಕೆ ಈಚೆ ಬರುವುದಿಲ್ಲ?



ಗೆಳೆಯ ವರುಣನೊಡನೆ ಹರಟಲು ಆ ಅಮರನಿಗೆ ಅದೇ ಸುಸಮಯವಂತೆ.

ಮಹಾವೀರ ಕಾಸರ, ಶಿವಮೊಗ್ಗ

ನಮ್ಮ ಪ್ರಶ್ನೆಗೆ ಉತ್ತರಿಸದಿದ್ದರೆ ನಿಮಗೆ ಉತ್ತರ ಗೊತ್ತಿಲ್ಲ ಎಂದು ಭಾವಿಸಬಹುದೆ?

ದ್ರಾಕ್ಷಿ ಹುಳಿ ಎಂದ ನರಿಯ ಮೇಲೆ ತೋಟದವನು ಕೇಸ್ ಹಾಕಲಿಲ್ಲ.

ಪ್ರಿಯ ಪೂಜಾರಿ, ಪಂಜ

ಗಂಡು ಅಧಿಕ ಜ್ಞಾನ, ಕನಿಷ್ಠ ಅರ್ಥೈಸುವಿಕೆ. ಹೆಣ್ಣು...?

ಅಧಿಕ ಸಂಗ್ರಹ, ಕನಿಷ್ಠ ವ್ಯರ್ಥೈಸುವಿಕೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಹೆಣ್ಣಿಗೆ ಶಿವನ ತರಹ ಮೂರನೇ ಕಣ್ಣು ಕೊಟ್ಟಿದ್ದರೆ?



ಐಲೈನರ್, ಐಶ್ಯಾಡೋ, ಐಬ್ರೋ ಶೇಪಿಂಗ್ ಖರ್ಚು 1/3 ಭಾಗ ಹೆಚ್ಚುತ್ತಿತ್ತು.

ಅನಸೂಯ ಟಿ. ಕೇದಿಗೆಮನೆ

ಗಾದೆಮಾತುಗಳು ಕಾಲಕ್ಕೆ ತಕ್ಕಂತೆ ಬದಲಾಗಬೇಕಲ್ಲವೆ?

ಆಗುತ್ತಿವೆ. ಉದಾ: ಸೆಲ್ಫೀಗ್ ಹೋದ್ಮಾನ ಸೆಲ್ಫೋನ್ ಕೊಟ್ರೂ ಬರಲ್ಲ.

ಜಿ. ಸುಬ್ರಹ್ಮಣ್ಯ, ಬೆಂಗಳೂರು

ಬಾಳಿನಲ್ಲಿ ಸದಾಕಾಲ ಹಾಲು–ಜೇನು ಇರಲು ಸಾಧ್ಯವೆ?

ಹೂಂ. ಕ್ರಮವಾಗಿ ಡೈರಿಯಲ್ಲಿ, ಜೇನುಸಾಕಣೆ ಕೇಂದ್ರದಲ್ಲಿ.

ಎಸ್.ಟಿ. ಲಕ್ಷ್ಮಿ

'ಮೌನಂ ಸಮ್ಮತಿ ಲಕ್ಷಣಂ' ಇದು ಯಾವ ಸಮಯಕ್ಕೆ ಸೂಕ್ತ?

ಮೌನೇನ ಪ್ರಾಫಿಟ್ ಜಾಸ್ತಿ ಆಗುವ ಎಲ್ಲ ಸಮಯಗಳಲ್ಲೂ.

ರಮಾನಂದ ರೆಡ್ಡಿ, ಮದಕರಿಪುರ

ಧಾರಾವಾಹಿಗಳಲ್ಲಿ ನಟಿಸುವ ಖಳನಾಯಕಿಯರಿಗೆ ಇರುವ ಅರ್ಹತೆಗಳೇನು?

ಗೊಂಬೆಮುಖ, ತೀಕ್ಷ್ಣ ಕಣ್ಣು, ಗಿಳಿಪಾಠ, ಮಿನಿಮಮ್ ಪೇಮೆಂಟಿಗೆ ಮ್ಯಾಕ್ಸಿಮಮ್ ದುಡಿತ.

ಡಾ. ತಿಮ್ಮರಾಜು, ದಾವಣಗೆರೆ

ಮತಾಂತರಕ್ಕೂ ಪಕ್ಷಾಂತರಕ್ಕೂ ಏನು ಸಂಬಂಧ?

ಮತವೆಂಬ ಪದವೇ – ಅಲ್ಲಿ ಕ್ಯಾಸ್ಟು, ಇಲ್ಲಿ ವೋಟು.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ

ಜೀವನದ ಕುಸುಮ ಯಾವುದು?

ಬಾಲ್ಯ.

ಬಿ. ಚಂದ್ರೇಗೌಡ, ಬೆಂಗಳೂರು

ವಿದ್ವತ್‌ಗೂ ವಿದ್ಯುತ್‌ಗೂ ಏನು ವ್ಯತ್ಯಾಸ?

ವಿದ್ವತ್ತಿನ ಬೆಳಕನ್ನು ಆಫ್ ಮಾಡುವ ಸ್ವಿಚ್ ಇಲ್ಲ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ಧ್ಯಾನಕ್ಕೂ ಜ್ಞಾನಕ್ಕೂ ವ್ಯತ್ಯಾಸವೇನು ಸರ್?

ಧ್ಯಾನ ಆಳವಾಗಿರಬೇಕು; ಜ್ಞಾನ ವಿಸ್ತಾರವಾಗಿರಬೇಕು.

ಅಮರಯ್ಯಾ ಪತ್ರಿಮಠ, ಸುರಪುರ

ನಮ್ಮ ಜೀವನದ ಸಾರಥಿ ಯಾರು?

ಕುತೂಹಲ. ಅದಿಲ್ಲದ ಜೀವನ ಸ್ತಬ್ಧ.

ಜಿ. ಪ್ರದೀಪಕುಮಾರ್, ಹೂವಿನಹಡಗಲಿ

ಶ್ರೀಮಂತ ಯುವಕ ಯುವತಿಯರು ಫ್ಯಾಷನ್ ಹೆಸರಿನಲ್ಲಿ ಹರಿದ ಜೀನ್ಸ್ ಬಟ್ಟೆಗಳನ್ನು ಧರಿಸುವುದೇಕೆ?

ಅಟ್‌ಲೀಸ್ಟ್ ಬಟ್ಟೆಯ ವಿಷಯದಲ್ಲಾದರೂ ಬಡವರಿಗೆ ಈಕ್ವಲ್ ಸ್ಟೇಟಸ್ ನೀಡಲೆಂದು.

## ವಾರದ ಪ್ರಶ್ನೆ

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

ಹೆಣ್ಣು ಪದ್ಯ. ಗಂಡು ಗದ್ಯ. ಮಕ್ಕಳು ರಗಳೆ. ಮುದುಕರು?

ನಿಘಂಟು.

ವಿದ್ಯಾ ಎನ್. ಪೈ, ಕಾಸರಕೋಡ

ಬೆಳಕು ಕಂಡೊಡನೆ ಕತ್ತಲೆ ಓಡುವುದೇಕೆ?

ಅದಕ್ಕೆ ಲೈಟ್ ಅಲರ್ಜಿ ಅಂತೆ.

ಪಿ.ಎನ್. ಶ್ರೀವತ್ಸ, ಬೆಂಗಳೂರು

ಜನತೆಯ ಬ್ಲಡ್‌ಗ್ರೂಪ್ ಬೇರೆಬೇರೆಯಾಗಿದ್ದರೂ ಕಚ್ಚುವ ಸೊಳ್ಳೆಗೆ ಏನೂ ಆಗದಿರುವ ಕಾರಣ?

ಅದರ ಹೊಟ್ಟೆಯೂ ಎಲ್ಲಕ್ಕೆ ಎಲ್ಲವನ್ನೂ ಸೇರಿಸಿ ತಿಂದೂ ಅರಗಿಸಿಕೊಳ್ಳುವ ಭಿಕ್ಷುಕನ ಹೊಟ್ಟೆಯಂತಿದೆಯಂತೆ.

ಮಲ್ಲಿಕಾರ್ಜುನ, ಸುರಧೇನುಪುರ

ಸುಳ್ಳು ಹೇಳಿದರೆ ತಲೆಕೂದಲು ಉದುರಿಹೋಗುತ್ತವಂತೆ. ಹೌದಾ?



ಹಾಗಿದ್ದಿದ್ದರೆ ಮುಕ್ಕಾಲು ಜಗತ್ತು ಬಾಂಡ್ಲಿಯಾಗಿರಬೇಕಿತ್ತು.

ಬಿ.ಆರ್. ಉಷಾ, ಬೆಂಗಳೂರು

ಕಟ್ಟಿಕೊಂಡವಳಿಗಿಂತ ಇಟ್ಟುಕೊಂಡವಳ ಮೇಲೆ ಪ್ರೀತಿ ಜಾಸ್ತಿ. ಯಾಕೆ?

ಅಭದ್ರತೆ ಇದ್ದಲ್ಲಿ ಕಾಳಜಿ ಹೆಚ್ಚು.

ರಾಜೀವ ಎನ್. ಮಾಗಲ್, ಸಕಲೇಶಪುರ

ಚರ್ಮದ ಬಣ್ಣ ಆಧರಿಸಿ ಸ್ನೇಹ, ನೆಂಟಸ್ತನ ಮಾಡುವವರಿಗೆ ಏನೆನ್ನಬೇಕು?

'ತೊಗಲ್ಬಂಧಿ' ಎಂದು ಯಾವುದೇ ಅನುಮಾನ ಇಲ್ಲದೆ ಕರೆಯಬಹುದು.

■ **ರಾಮ್**

ನೀವೂ ಪ್ರಶ್ನೆ ಕಳಿಸಿ: **editorsu@sudha.co.in**